**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ**

ದಿನಾಂಕಃ 05.12.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು ಃ 2 ನೇ (ಎ, ಡಿ, ಇ ) ಪ್ರತಿವಾದಿ ಪರ ವಕೀಲರಿಂದ,**

ನನ್ನ ಗಂಡ ಜೀವಂತ ಇದ್ದಾಗೆ ಸರ್ವೆ ನಂ. 512, 513 ಮತ್ತು 514 ರ ಆಸ್ತಿಗಳನ್ನು ಕೆ.ಎಸ್. ಎಫ್.ಸಿ ಸಂಸ್ಥೆಗೆ ಅಡಮಾನ ಮಾಡಿದ್ದರು ಎಂದರೆ ಇರಬಹುದು ನನಗೆ ಗೊತ್ತಿಲ್ಲ. ನನ್ನ ಯಜಮಾನರು ಮೃತ ಪಟ್ಟ ನಂತರ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಮಕ್ಕಳು ಮಾಲೀಕರು ಎಂದರೆ ಸರಿಯಲ್ಲ, ನಾನೇ ಮಾಲೀಕಳಾಗಿರುತೇನೆ. ಸದರಿ ಕೆ.ಎಸ್.ಎಫ್.ಸಿ ಸಂಸ್ಥೆ ನನ್ನ ಯಜಮಾನರು ಹಣವನ್ನು ಸಾಲವಾಗಿ ಪಡೆದಿದ್ದು ಅದನ್ನು ಮರು ಪಾವತಿಸದ ಕಾರಣ ಕೆ.ಎಸ್.ಎಫ್.ಸಿ ಸಂಸ್ಥೆಯವರು 1994 ರಲ್ಲಿ ತಮ್ಮ ವಶಕ್ಕೆ ಪಡೆದುಕೊಂಡಿದ್ದರು ಎಂದರೆ ನಾವು ಮರುಪಾವತಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಾಲವನ್ನು ನಾವು ತೀರಿಸದೆ ಇದ್ದ ಕಾರಣ ಕೆ.ಎಸ್.ಎಫ್.ಸಿ ಸಂಸ್ಥೆಯವರು ಸದರಿ ಅಡಮಾನ ಆಸ್ತಿಗಳನ್ನು ಹರಾಜು ಇಟ್ಟಿದ್ದರು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ದಿನಾಂಕ 30.03.2000 ಇಸ್ವಿಯಲ್ಲಿ 2 ನೇ ಪ್ರತಿವಾದಿಯರು ಹರಾಜಿನಲ್ಲಿ ಸದರಿ ಆಸ್ತಿಗಳನ್ನು ಪಡೆದುಕೊಂಡಿದ್ದಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. 2002 ನೇ ಇಸ್ವಿಯಲ್ಲಿ ಹರಾಜು ಪ್ರಕ್ರೀಯೇ ಮುಗಿದ ನಂತರ ಅಡಮಾನದ ಹಣದ ಬಾಕಿಗಾಗಿ ನಾವು ಕೆ.ಎಸ್.ಎಫ್.ಸಿ ಸಂಸ್ಥೆಯವರೊಂದಿಗೆ ಓ.ಟಿ.ಎಸ್ ಸ್ಕೀಮ್ ನ ಅಡಿಯಲ್ಲಿ ಹೊಂದಾಣಿಕೆ ಮಾಡಿಕೊಂಡು ಹಣವನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಓ.ಟಿ.ಎಸ್ ಸ್ಕೀಮ್ ನ ಅಡಿಯಲ್ಲಿ ಪಾವತಿ ಮಾಡಿದ ನಂತರ ಉಳಿಕೆ ಆಸ್ತಿಯನ್ನು ಕರಡಿ ಕೊಟ್ರಯ್ಯ ರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಹಾಗಾಗಿ 2009 ರಲ್ಲಿ ನನ್ನ ವಾದಿಗಳಿಗೆ ದಾನ ಪತ್ರದ ಮೂಲಕ ದಾವಾ ಸರ್ವೆ ನಂ. 512 ರ ಆಸ್ತಿಯನ್ನು ಬರೆದುಕೊಡಲು ಯಾವುದೇ ಆಸ್ತಿ ನನಗೆ ಉಳಿದಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡಬೇಕೆಂಬ ಕಾರಣಕ್ಕಾಗಿ ಈ ದಾವೆಯನ್ನು ಸಲ್ಲಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. 2002 ರಲ್ಲಿ ಕರಡಿ ಕೊಟ್ರಯ್ಯ ರವರಿಗೆ ಮಾರಾಟ ಮಾಡಿದ ಆಸ್ತಿಯ ಚೆಕ್ಕು-ಬಂದಿಯ ಯಾವ ಭಾಗದಲ್ಲಿ ಒಂದು ಭಾಗದಲ್ಲಿ ಎಲ್.ಎನ್ ಬಸವರಾಜು ಎಂದು ಬರೆದಿದೆ ಎಂದರೆ ಸರಿಯಲ್ಲ. ದಿನಾಂಕ 21.08.2008 ರಂದು ಶ್ರೀ.ರಂಗಯ್ಯ ಶೆಟ್ಟಿ ವಕೀಲರು ಬಳ್ಳಾರಿ ರವರಿಂದ 1 ನೇ ಪ್ರತಿವಾದಿಗೆ

ನೋಟಿಸ್ ಕೊಡಿಸಿದ್ದೆ ಎಂದರೆ ನನಗೆ ಸೊಸೆಯಂದಿರಗೆ ಗೊತ್ತು ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲು ಃ 1 ನೇ ಪ್ರತಿವಾದಿ ಪರ ಶ್ರೀ ಎ.ವಿ.ಕೆ ವಕೀಲರಿಂದ,</u>**

ನನ್ನ ಯಜಮಾನರ ಹೆಸರು ಮಾಬು ಸಾಬ್. ನನ್ನ ಯಜಮಾನರು ಕಾಲವಾದ ನಂತರ ನಾನು ಪ್ರತಿವಾದಿಗಳ ವಿರುದ್ಧ ದಾವೆಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ದಾನ ಪತ್ರವನ್ನು ವಾದಿಗೆ ಮಾಡಿಕೊಟ್ಟಿರುತ್ತೇನೆ ಹಾಗಾಗಿ ಅವರು ಈ ದಾವೆಯನ್ನು ಹಾಕಿರುತ್ತಾರೆ. ನನ್ನ ಯಜಮಾನರು ಮೃತಪಟ್ಟ ನಂತರ ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ನನ್ನ ಹೆಸರಿಗೆ ಪೌತಿ ವಾರಸು ಮೇರೆಗೆ ಹಕ್ಕು ಬದಲಾವಣೆಯಾಗಿದೆ. ಯಾವ ವರ್ಷದಂದು ಹಕ್ಕು ಬದಲಾವಣೆಯಾಗಿದೆ ಎಂಬುವುದು ನನಗೆ ಗೊತ್ತಿಲ್ಲ. ನನ್ನ ಯಜಮಾನರು ಮೃತಪಟ್ಟ ನಂತರ ನಾನು ವಾದಿಯ ಹೆಸರಿಗೆ ಹಕ್ಕು ಮಾಡುವ ಸಂಬಂಧವಾಗಿ ನೊಂದಾಯಿತ ದಾಖಲೆಗಳು ಇವೆಯಾ ಎಂದರೆ ದಾಖಲೆ ಇದೆ. ಸದರಿ ದಾಖಲೆಗಳನ್ನು ಹಾಜರು ಪಡಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ, ವಾದಿಗಳಿಗೆ ಗೊತ್ತಿರುತ್ತದೆ. ನಾವು ದಾವಾ ಆಸ್ತಿಯ ಮಾಲೀಕರು ಎಂಬುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.ವಾದಿಗಳು ಈ ಹಿಂದೆ ಓ.ಎಸ್ ನಂ.21/2011 ನ್ನು ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗಳನು ವಾದಿಗಳಿಗೆ ದಾನದ ಮೂಲಕ ನೀಡಲು ನನಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಕೆ.ಎಸ್.ಎಫ್.ಸಿ ಸಂಸ್ಥೆಯವರು ಅಡಮಾನ ಪತ್ರದ ಮೂಲಕ ನನ್ನ ಗಂಡ ಪಡೆದ ಹಣವನ್ನು ವಾಪಸ್ಸು ನೀಡಿದ ಇರುವ ಕಾರಣ ಸದರಿ ಸಂಸ್ಥೆಯವರು ಸದರಿ ಆಸ್ತಿಗಳನ್ನು ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡಿದ ಪ್ರಕ್ರೀಯೇಯನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ ನನ್ನ ಮಕ್ಕಳು ಪ್ರಶ್ನಿಸಿರುತ್ತಾರೆ. ನನ್ನ ಮಕ್ಕಳು ಯಾವುದೇ ಪ್ರಶ್ನೆ ಮಾಡಿರುವುದಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1994 ರಲ್ಲಿ ಕೆ.ಎಸ್.ಎಫ್.ಸಿ ಸಂಸ್ಥೆಯವರು ಅಡಮಾನ ಪತ್ರದ ಆಧಾರದ ಮೇಲೆ ದಾವಾ ಆಸ್ತಿಗಳನ್ನು ಕಲಂ -29 ಎಸ್.ಪಿ.ಸಿ ಆಕ್ಟ್ ನ ಅಡಿಯಲ್ಲಿ ತಮ್ಮ ವಶಕ್ಕೆ ಪಡೆದಿರುತ್ತಾರೆ ಎಂದರೆ ಮೊಸ ಮಾಡಿಕೊಂಡಿರುತ್ತಾರೆ. ಸದರಿ ಕೆ.ಎಸ್.ಎಫ್.ಸಿ ಸಂಸ್ಥೆಯವರು ಹಾಗೂ 2 ನೇ ಪ್ರತಿವಾದಿ ಮೊಸದಿಂದ ಸದರಿ ದಾವಾ ಆಸ್ತಿಗಳನು

ಪಡೆದುಕೊಂಡಿದ್ದಾರೆ ಎಂಬುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುವುದಿಲ್ಲ. ವಾದಿಗಳು ಈ ದಾವೆಯನ್ನು ಯಾವ ಕಾರಣಕ್ಕೆ ಹಾಕಿರುತ್ತಾರೊ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಅಂಶಗಳನ್ನು ನನ್ನ ಸೊಸೆಯಂದಿರು ಹೇಳಿ ಬರೆಯಿಸಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ನನ್ನ ಸೊಸೆಯಂದಿರಗೆ ಗೊತ್ತು.

**ಮರುವಿಚಾರಣೆ ಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**